*E.C.A.No. 22/2024*
*PW:03*

**ಸಾಕ್ಷಿಯನ್ನು ದಿಃ *22/08/2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು ಃ ಶ್ರೀ ಎ.ಎಸ್.ಶಿಂಧೆ ವಕೀಲರಿಂದ ಎದುರುದಾರರ ಪರವಾಗಿ.**

ನಾನು 40 ಪ್ರತಿಶತ ನ್ಯೂನತೆ ಇದೆ ಎಂದು ನೀಡಿದ್ದು, ಬಲಗಣ್ಣಿಗೆ ಮಾತ್ರ ಅನ್ವಯಿಸುತ್ತದೆ. ಆದ್ದರಿಂದ ಎಡಗಣ್ಣಿನ ನೋಟಕ್ಕೆ ಯಾವುದೇ ರೀತಿ ತೊಂದರೆ ಅಥವಾ ನ್ಯೂನತೆ ಇರುವುದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ಕನ್ನಡಕ ಇರುತ್ತದೆ ಎಂದು ಉತ್ತರಿಸುತ್ತಾರೆ. ಆದ್ದರಿಂದ ಗಾಯಾಳು ತನ್ನ ದೈನಂದಿನ ಕಾರ್ಯಗಳನ್ನು ಮಾಡಬಹುದು ಎಂದರೆ ನಿಜ. ಗಾಯಾಳು ಕಂಪ್ಯೂಟರ ಕೆಲಸವನ್ನು ಸಹ ಸರಳವಾಗಿ ಮಾಡಬಹುದು ಎಂದರೆ ನಿಜ.

ದಿಃ05-02-2024 ರಂದು ಗಾಯಾಳು ನಮ್ಮ ಜಿಲ್ಲಾ ಆಸ್ಪತ್ರೆಗೆ ಬಂದಿದ್ದು, ಅವರನ್ನು ತಪಾಸಣೆ ಮಾಡಿರುತ್ತೇವೆ, ಅದರ ವಿವರಗಳನ್ನು ಸಹ ಸಲ್ಲಿಸಿರುತ್ತೇವೆ. ಎಸಡಿಎಂ ಆಸ್ಪತ್ರೆಯವರು ನೀಡಿರುವ ಡಿಸಚಾರ್ಜ ಸಮರಿ ಮತ್ತು ನಾವು ದೈಹೀಕ ಮತ್ತು ಇತರೇ ತಪಾಸಣೆಗಳನ್ನು ತುಲನೆ ಮಾಡಿ ನೋಡಿರುತ್ತೇವೆ. ಎಸಡಿಎಂ ಆಸ್ಪತ್ರೆಯವರು ನೀಡಿರುವ ಡಿಸಚಾರ್ಜ ಸಮರಿಯಲ್ಲಿ ನ್ಯೂನತೆ ಪ್ರತಿಶತ ಉಲ್ಲೇಖ ಮಾಡಿರುವುದಿಲ್ಲ ಎಂದರೆ ನಿಜ. ಗಾಯಾಳುವಿಗೆ ಚಿಕಿತ್ಸೆ ನೀಡಿರುವ ವೈದ್ಯರೇ ಅಂಗನ್ಯೂನತೆ ಪ್ರಮಾಣಪತ್ರ ಒದಗಿಸಬಹುದು ಎಂದರೆ ಇರಬಹುದು.

ಗಾಯಾಳು ಎಸಡಿಎಂ ಆಸ್ಪತ್ರೆಯಲ್ಲಿ ಮೂರು ವಾರಗಳ ಕಾಲ ಚಿಕಿತ್ಸೆ ಪಡೆದಿದ್ದು ಕಂಡು ಬಂತು. ಈ ರೀತಿ ಪಡೆದುಕೊಂಡ ಮೂರು ವಾರದ ಚಿಕಿತ್ಸೆಯಲ್ಲಿ ಕಣ್ಣಿನ ತೊಂದರೆ ಇದೆ ಎಂದು ಗಾಯಾಳು ಹೇಳಿದ್ದು ಮತ್ತು ಅದರ ಕುರಿತು ಚಿಕಿತ್ಸೆ ಪಡೆದಿದ್ದು ಎಲ್ಲಿಯೂ ಕಂಡು ಬಂದಿಲ್ಲ. ಗಾಯಾಳುವಿಗೆ ದೈಹೀಕ ಮತ್ತು ಇತರೇ ತಪಾಸಣೆ ಮಾಡದೇ ಮತ್ತು ಎಸಡಿಎಂ ಆಸ್ಪತ್ರೆಯರು ನೀಡಿರುವ ದಾಖಲೆ ನೋಡದೆ ಗಾಯಾಳುವಿಗೆ ಅನುಕೂಲವಾಗುವ ರೀತಿ ಪರಿಹಾರ ಹಣ ಸಿಗಲಿ ಎಂದು ಅವರಿಗೆ ಸುಳ್ಳು ಅಂಗನ್ಯೂನತೆ ಪ್ರಮಾಣಪತ್ರ ಒದಗಿಸಿರುತ್ತೇವೆ ಎಂದು ಸೂಚಿಸುವ ನಿಮ್ಮ ಸಲಹೆ ಸರಿಯಲ್ಲ.

***ಮರು ವಿಚಾರಣೆ ಃ ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.